"ಒರಿಸ್ಸಾ ಪರಿಹಾರ ನಿಧಿ" ಎಂದು ಸೆಲೆಗಳನ್ನು ತೆಗೆಸಿದ್ದಾರೆಂಬುದರ ಬಗ್ಗೆ ಮಾಹಿತಿ ತರಿಸಿ ನಿಮಗೆ ತಿಳಿಸುತ್ತೇನೆ. ಈ ವಿಚಾರವಾಗಿ ಬೆಂಗಳೂರಿನಲ್ಲಿ ಕಾಳಜಿ ಇದೆ. ಅಲ್ಲಿ ದುರಂತಕ್ಕೆ ಈಡಾಗಿರುವಂತಹ ಅಣ್ಣತಮ್ಮಂದಿರು, ಅಕ್ಕತಂಗಿಯರು ಯಾರಿದ್ದಾರೆ, ಅವರಿಗೆ ಆಶ್ರಯ ಮತ್ತು ಸಹಾಯಕ್ಕೆ ಹೋಗತಕ್ಕಂಥಾದ್ದು ನಮ್ಮ ಕರ್ನಾಟಕ ರಾಜ್ಯದಲ್ಲಿ ಸಂಪ್ರದಾಯವಾಗಿ ನಡೆಸಿಕೊಂಡು ಬಂದಿರುವಂತಹ ವಿಧಿ ಏನಿದೆ, ಇದು ದೇಶದ ಯಾವುದೇ ಭಾಗದಲ್ಲಿ ಪ್ರಳಯ, ಪ್ರಕೃತಿ ವಿಕೋಪ, ಮಳೆಯಿಂದಾಗುವ ಹಾನಿ, ಇಂತಹ ದುರಂತಗಳು ಆದಾಗ ಅವುಗಳ ಸಹಾಯಕ್ಕಾಗಿ ಹಿಂದಿನಿಂದಲೂ ನಾವು ಧಾವಿಸಿದ್ದೇವೆ. ಅದೇ ರೀತಿಯಲ್ಲಿ ಇವತ್ತಿಗೂ ಧಾವಿಸಿದ್ದೇವೆ; ಮತ್ತೆ ಸಾರ್ವಜನಿಕರು ಸಹ ಹೆಚ್ಚಿನ ರೀತಿಯಲ್ಲಿ ಸಹಾಯವನ್ನು ನೀಡುತ್ತಿದ್ದಾರೆ. ಒರಿಸ್ಸಾದಲ್ಲಿ ಅತ್ಯಂತ ಭೀಕರವಾದಂತಹ ಪ್ರಕೃತಿ ವಿಕೋಪಕ್ಕೆ ಸಿಕ್ಕಿರುವಂತಹ ಜನಗಳ ಸಹಾಯಕ್ಕೆ, ರಕ್ಷಣೆಗೆ ಮುಂದಾಗಬೇಕೆಂದು ಈ ಸದನದ ಮೂಲಕ, ತಮ್ಮ ಮೂಲಕ ನಮ್ಮ ಕರ್ನಾಟಕ ರಾಜ್ಯದ ಜನತೆಯಲ್ಲಿ, ಸಂಘ ಸಂಸ್ಥೆಗಳಲ್ಲಿ, ನಾನು ಅತ್ಯಂತ ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ. ತಾವು ಈ ಸಭೆಯಲ್ಲಿ ಕೊಟ್ಟಿರುವಂತಹ ಆಶ್ವಾಸನೆಗೋಸ್ಕರ ನಾನು ಋಣಿಯಾಗಿದ್ದೇನೆ.

2. ಸಭೆಯ ಮುಂದಿಡಲಾದ ಕಾಗದ ಪತ್ರಗಳು:-

I ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, 1978ರ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮದ ಕಲಂ 8(3)ರ ಮೇರೆಗೆ;

1. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡಿ ದಿನಾಂಕ 8.10.99ರಂದು ಹೊರಡಿಸಿದ ಡಿಪಿಎಆರ್ 68 ಎಸ್ಆರ್ಇ 96ನೇ ಸಂಖ್ಯೆಯ ಅಧಿಸೂಚನೆ;

2. ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿನ ಪಶು ವೈದ್ಯಕೀಯ ಪರೀಕ್ಷಕ ಹುದ್ದೆಗಳ ನೇಮಕಾತಿಗಾಗಿ ವಿಶೇಷ ನಿಯಮಾವಳಿಗಳನ್ನು ರಚಿಸಿ ದಿನಾಂಕ 6.10.99ರಂದ ಹೊರಡಿಸಿದ ಡಿಪಿಎಆರ್ 23 ಎಸ್ಆಇ 99ನೇ ಸಂಖ್ಯೆಯ ಅಧಿಸೂಚನೆ;

1965ರ ಕರ್ನಾಟಕ ಅಬಕಾರಿ ಕಾಯ್ದೆ ಅಧಿನಿಯಮ 71(4)ರ ಕಲಂ ಮೇರೆಗೆ;

3. 1967ರ ಕರ್ನಾಟಕ ಅಬಕಾರಿ ಅನ್ವಯ (ಬಾಟ್ಲಿಂಗ್ ಆಫ್ ಲಿಕ್ಕರ್ಸ್) ನಿಯಮಾವಳಿಗಳಿಗೆ ತಿದ್ದುಪಡಿ ಮಾಡಿ ದಿನಾಂಕ 25.10.99ರಂದು ಹೊರಡಿಸಿದ ಎಫ್ಡಿ 6 ಪಿಇಎಸ್ 99ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

II ಶ್ರೀ ಹೆಚ್.ಕೆ. ಪಾಟೀಲ್ (ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿ):- ಮಾನ್ಯ ಅಧ್ಯಕ್ಷರೆ, 1980ರ ಕಾಡಾ ಅಧಿನಿಯಮದ 25ನೇ ಕಲಂ ಮೇರೆಗೆ;

1998-99ನೇ ಸಾಲಿನ ಕಾಡಾ ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಶಿವಮೊಗ್ಗದ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

III ಶ್ರೀ ಎಸ್.ಆರ್. ಕಾಶಪ್ಪನವರೆ (ಸಣ್ಣ ಕೈಗಾರಿಕಾ ಮಂತ್ರಿ):- ಮಾನ್ಯ ಅಧ್ಯಕ್ಷರೆ, 1956ರ ಕಂಪನಿಗಳ ಕಾಯ್ದೆಯ 619(ಎ) ಕಲಂ ಮೇರೆಗೆ;

1998-99ನೇ ಸಾಲಿನ ಮಾರ್ಕೆಟಿಂಗ್ ಕನ್ಸಲ್ಟೆಂಟ್ಸ್ ಅಂಡ್ ಏಜನ್ಸೀಸ್ ಲಿಮಿಟೆಡ್‌ನ 27ನೇ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

IV ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಮಂತ್ರಿ):- ಮಾನ್ಯ ಅಧ್ಯಕ್ಷರೆ,1964ರ ಕರ್ನಾಟಕ ಭೂ ಕಂದಾಯ ಕಾಯ್ದೆಯ ನಿಯಮ 194ರ ಮೇರೆಗೆ;

1. ಸಾಕಷ್ಟು ಮಳೆಯಾಗದೆ ಬೆಳೆಗಳು ಕಡಿಮೆ ಪ್ರಮಾಣದಲ್ಲಿ ಬೆಳೆದಿರುವುದರಿಂದ, ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ 128 ಗ್ರಾಮಗಳ 97-98ನೇ ಸಾಲಿನ ಭೂ ಕಂದಾಯ ರೂ.1,578.76ನ್ನು ಮನ್ನಾ ಮಾಡಿ ದಿನಾಂಕ 26.8.99ರಂದು ಹೊರಡಿಸಿದ ಆರ್‌ಡಿ 305 ಟಿಆರ್‌ಎಂ 99ನೇ ಸಂಖ್ಯೆಯ ಅಧಿಸೂಚನೆ;

2. ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನ 57 ಗ್ರಾಮಗಳ 97-98ನೇ ಸಾಲಿನ ಭೂ ಕಂದಾಯ ರೂ.19,020.74ಗಳನ್ನು ಮನ್ನಾ ಮಾಡಿ ದಿನಾಂಕ 16.9.99ರಂದು ಹೊರಡಿಸಿದ ಆರ್‌ಡಿ 444 ಟಿಆರ್‌ಎಂ 98ನೇ ಸಂಖ್ಯೆಯ ಅಧಿಸೂಚನೆ;

3. ಕೊಪ್ಪಳ ಜಿಲ್ಲೆಯ ಕುಷ್ಟಗಿ ಮತ್ತು ಗಂಗಾವತಿ ತಾಲ್ಲೂಕಿನ 177 ಮತ್ತು 77 ಗ್ರಾಮಗಳ 98-99ನೇ ಸಾಲಿನ ಭೂ ಕಂದಾಯ ಒಟ್ಟು ರೂ. 2,2,207. 11ಗಳನ್ನು ಮನ್ನಾ ಮಾಡಿ ದಿನಾಂಕ 2.9.99ರಂದು ಹೊರಡಿಸಿದ ಆರ್‌ಡಿ 140 ಟಿಆರ್‌ಎಂ 99ನೇ ಸಂಖ್ಯೆಯ ಅಧಿಸೂಚನೆ;

4. ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ 81 ಗ್ರಾಮಗಳ 97-98ನೇ ಸಾಲಿನ ಭೂ ಕಂದಾಯ ರೂ.22,856.29ಗಳನ್ನು ಮನ್ನಾ ಮಾಡಿ ದಿನಾಂಕ 4.8.99ರಂದು ಹೊರಡಿಸಿದ ಆರ್‌ಡಿ 435 ಟಿಆರ್‌ಎಂ 98ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

V ಶ್ರೀ ಟಿ.ಬಿ.ಜಯಚಂದ್ರ (ಕೃಷಿ ಮಂತ್ರಿ):- ಮಾನ್ಯ ಅಧ್ಯಕ್ಷರೆ,1956ರ ಕಂಪನಿಗಳ ಕಾಯ್ದೆಯ 619(ಎ) ಕಲಂ ಮೇರೆಗೆ;

1997-98ನೇ ಸಾಲಿನ ಕರ್ನಾಟಕ ರಾಜ್ಯ ಕೃಷಿ ಸಂಸ್ಕರಣ ಹಾಗೂ ರಫ್ತು ನಿಗಮ ನಿಯಮಿತದ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

VI ಡಾ: ಜಿ. ಪರಮೇಶ್ವರ್ (ಉನ್ನತ ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನ ರಾಜ್ಯ ಮಂತ್ರಿ):- ಮಾನ್ಯ ಅಧ್ಯಕ್ಷರೆ,1976ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯದ ಅಧಿನಿಯಮದ ಕಲಂ 8(9)ರ ಮೇರೆಗೆ;

1. ಕುವೆಂಪು ವಿಶ್ವವಿದ್ಯಾಲಯದ ಉಪನ್ಯಾಸಕರಾದ ಶ್ರೀ ಎನ್. ಶಂಕರ್ ಹಾಗೂ ಡಾ: ಎನ್.ಕೆ. ಗೌಡ ಇವರುಗಳ ವೇತನ ನಿಗದಿಗೊಳಿಸಿ ದಿನಾಂಕ 6.9.99ರಂದು ಹೊರಡಿಸಿದ ಇಡಿ 33 ಯುಎನ್‌ವಿ 99ನೇ ಸಂಖ್ಯೆಯ ಅಧಿಸೂಚನೆ;

1978ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 45(2) ಹಾಗೂ 42(3)ನೇ ಕಲಂಗಳ ಮೇರೆಗೆ;

2. 1997-98ನೇ ಸಾಲಿನ ಕರ್ನಾಟಕ ವಿಶ್ವವಿದ್ಯಾಲಯದ ವಾರ್ಷಿಕ ವರದಿ;

3. 1997-98ನೇ ಸಾಲಿನ ಮೈಸೂರು ವಿಶ್ವವಿದ್ಯಾಲಯದ ಲೆಕ್ಕ ಪರಿಶೋಧನಾ ವರದಿ ಮತ್ತು ಲೆಕ್ಕ ಪತ್ರಗಳು;

4. 1997-98ನೇ ಸಾಲಿನ ಕುವೆಂಪು ವಿಶ್ವವಿದ್ಯಾಲಯದ ಲೆಕ್ಕ ಪರಿಶೋಧನಾ ವರದಿ ಹಾಗೂ ವಿಶ್ವವಿದ್ಯಾಲಯ ನೀಡಿರುವ ಪಾಲನಾ ವರದಿ ಮತ್ತು 1997-98ನೇ ಸಾಲಿನ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ನಾವು ಸಹ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ, ಅದನ್ನು ಪ್ರಸ್ತಾಪ ಮಾಡುವುದಕ್ಕೆ ದಯಮಾಡಿ ಅವಕಾಶ ಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಬಸ್ ದರ ಏರಿಕೆಯ ಬಗ್ಗೆ ನಾವು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ಅದನ್ನು ಚರ್ಚಿಸಲು ನಮಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:- ಮಾನ್ಯ ಪಿ.ಜಿ.ಆರ್. ಸಿಂಧ್ಯರವರೆ ಮೊದಲು ಅವಕಾಶವನ್ನು ಕೊಟ್ಟಿದ್ದೇನೆ;